# ನೆಲಮೂಲ ಜ್ಞಾನದ ಒಣಬಿತ್ತನೆ

ಮಳೆಯೊಂದಿಗೆ ಹೊಂದಿಕೊಂಡು ವ್ಯವಸಾಯ ಮಾಡುವ ‘ಒಣಭೂಮಿ ಬಿತ್ತನೆ ಪದ್ಧತಿ’ ಕಲಬುರ್ಗಿ ಜಿಲ್ಲೆಯ ಹಲವು ಪ್ರದೇಶಗಳಲ್ಲಿ ತೊಗರಿ ಕೃಷಿಯೊಂದಿಗೆ ಜಾಲ್ತಿಯಲ್ಲಿತ್ತು. ಜನವರಿಯಿಂದ ಮಾರ್ಚ್‌ವರೆಗೆ ಆಗಸ ವೀಕ್ಷಣೆ ಮಾಡಿ, ಮಳೆಯ ಪ್ರಮಾಣವನ್ನು ಅಂದಾಜು ಮಾಡಿಕೊಳ್ಳಲಾಗುತ್ತಿತ್ತು. ಮಳೆ ಸುರಿಯುವ ಸಮಯ ಲೆಕ್ಕಾಚಾರ ಮಾಡಿಕೊಂಡು, ಬಿತ್ತನೆಯ ಸಿದ್ಧತೆ ನಡೆಯುತ್ತಿತ್ತು.

ಸಾಮಾನ್ಯವಾಗಿ ಮಳೆಯಾದ ಬಳಿಕ ಬಿತ್ತನೆ ನಡೆದರೆ, ‘ಒಣಭೂಮಿ ಪದ್ಧತಿ’ಯಲ್ಲಿ ಅದು ವಿಭಿನ್ನ. ಮಳೆ ಸುರಿಯುವ ಮುನ್ನವೇ ಉಳುಮೆ ನಡೆಸಿ, ಕೊಟ್ಟಿಗೆ ಗೊಬ್ಬರವನ್ನು ಮಣ್ಣಿನಲ್ಲಿ ಸೇರಿಸುತ್ತಾರೆ. ಭರಣಿ ಹಾಗೂ ಕೃತ್ತಿಕಾ ಮಳೆ (ಏಪ್ರಿಲ್ ಅಂತ್ಯ – ಮೇ ಆರಂಭ) ಆಸುಪಾಸು ಈ ಕೆಲಸ ನಡೆಯುತ್ತದೆ. ಬಿತ್ತನೆಗೂ ಮುನ್ನ ತೊಗರಿ ಬೀಜಗಳನ್ನು 12 ಗಂಟೆ ನೀರಿನಲ್ಲಿ ನೆನೆಸಲಾಗುತ್ತದೆ. ಬಿತ್ತನೆ ಬಳಿಕ ಅಕಸ್ಮಾತ್ ಮಳೆ ವಿಳಂಬವಾದರೂ ಬೀಜದಲ್ಲಿನ ನೀರಿನ ಅಂಶವನ್ನು ಉಳಿಸುವ ಜಾಣ್ಮೆಯಿದು. ಮಳೆಗಾಗಿ ಕಾಯದೇ, ಮಣ್ಣು ಒಣಗಿದ್ದಾಗಲೇ ಬಿತ್ತನೆ ಪೂರ್ಣಗೊಳಿಸುತ್ತಾರೆ.

ತೊಗರಿ ಬೀಜ ಮೊಳಕೆಯೊಡೆದು ಸ್ವಲ್ಪ ದಿನಗಳಲ್ಲೇ ಬರುವ ರೋಹಿಣಿ ಮಳೆಯು ಸಸಿ ಬೆಳವಣಿಗೆಗೆ ಸಹಕಾರಿ. ಮುಂದೆ ಮೃಗಶಿರಾ ಹಾಗೂ ಆರಿದ್ರಾ ಮಳೆಗೆ ಸಸಿಗಳ ಬೆಳವಣಿಗೆ ಚೆನ್ನಾಗಿ ಆಗುತ್ತದೆ. ಮೂರು ತಿಂಗಳ ಬಳಿಕ ಹೂವಾಡುವ ಸಮಯದಲ್ಲಿ ಹೆಚ್ಚು ಮಳೆ ಬೇಕು. ಇದು ‘ಆಶ್ಲೇಷ’ ಮಳೆಯ ಅವಧಿ. ನಂತರ ಕಾಯಿ ಕಟ್ಟುವುದು, ಬಲಿಯುವುದು ಪ್ರಮುಖ ಹಂತಗಳು. ಈ ಘಟ್ಟ ಮುಗಿಯುವ ಹೊತ್ತಿಗೆ 150 ದಿನಗಳಾಗುತ್ತವೆ.

ನವೆಂಬರ್‌ನಲ್ಲಿ ಚಂಡಮಾರುತದ ಪರಿಣಾಮವಾಗಿ ಮಳೆ ಸುರಿಯುವುದು ವಾಡಿಕೆ. ಈ ಸಮಯದಲ್ಲಿ ಅಧಿಕ ಇಳುವರಿ ತಳಿಗಳು ಹೂವಾಡುವ ಹಂತದಲ್ಲಿದ್ದು, ಕಾಯಿಕೊರಕ ಕೀಟಬಾಧೆಗೆ ಸುಲಭವಾಗಿ ಈಡಾಗುತ್ತವೆ. ಒಣಬಿತ್ತನೆಯ ಬೆಳೆ ಕಾಯಿ ಬಲಿಯುವ ಹಂತ ತಲುಪಿರುತ್ತದೆ. ಹೀಗಾಗಿ ಕೀಟಬಾಧೆಗೆ ಅಷ್ಟಾಗಿ ಈಡಾಗುವುದಿಲ್ಲ.

ಮಳೆ ಆಶ್ರಿತ ಭತ್ತವನ್ನು ಒಣಭೂಮಿಗೆ ಬಿತ್ತುವ ವಾಡಿಕೆ ಸೊರಬ, ಶಿರಸಿ, ಮುಂಡಗೋಡ ಭಾಗದ ಮಲೆನಾಡಿನಲ್ಲೂ ಇದೆ.

ಸಾರವನ್ನು ಕೊಚ್ಚಿಕೊಂಡು ಹೋಗುವುದು ಮತ್ತು ಭೂಮಿಯು ಕೊಂಚ ಕಠಿಣವಾಗುವುದು’ ಎಂದು ನೂರು ವರ್ಷಗಳ ಹಿಂದೆ ಮೈಸೂರು ಮಹಾರಾಜರ ಕಾಲದಲ್ಲಿ ಪ್ರಕಟಗೊಂಡ ‘ವ್ಯವಸಾಯ ಬೋಧಿನಿ’ ಪುಸ್ತಕದಲ್ಲಿ ಮಳೆಯ ಬಗ್ಗೆ ದಾಖಲಾಗಿದೆ.

ಈ ಲೆಕ್ಕವೆಲ್ಲಾ ಈಗ ಉಲ್ಟಾಪಲ್ಟಾ ಆಗಿದೆ. ಮುಂಗಾರು ಮಳೆ ವರ್ಷದಿಂದ ವರ್ಷಕ್ಕೆ ನಿಧಾನವಾಗುತ್ತಾ ಜುಲೈ ಕೊನೆ – ಆಗಸ್ಟ್ ಮೊದಲ ವಾರಕ್ಕೆ ಬಂದು ನಿಂತಿದೆ. ಆದ್ರಿ ಮಳೆಯಲ್ಲಿ ಒಣಭೂಮಿ ಭತ್ತ, ಹಾರಕದ ಬಿತ್ತನೆ, ದೊಡ್ಡ ಹಸಲೆ ರಾಗಿ ಬಿತ್ತನೆ. ಚಿಕ್ಕ ಹಸಲೆ ಭತ್ತದ ನಾಟಿ. ದಕ್ಷಿಣ ಒಳನಾಡಿನ ಈ ಮಳೆ ಲೆಕ್ಕಾಚಾರ ಪ್ರಸ್ತುತ ಸಂಪೂರ್ಣ ಕೈ ಕೊಟ್ಟಿದೆ.

ಬಿತ್ತನೆ ನಿಧಾನವಾದಷ್ಟೂ ಕುಯಿಲು ನಿಧಾನವಾಗುತ್ತದೆ. ಚಳಿಗಾಲ ಬೇಗ ಆರಂಭವಾಗುವುದರಿಂದ ತೆನೆಯಲ್ಲಿ ಸರಿಯಾಗಿ ಕಾಳುಕಟ್ಟದೆ ಜೊಳ್ಳಾಗುತ್ತಿವೆ. ಇದರಿಂದ ಇಳುವರಿ ಗಣನೀಯವಾಗಿ ಕುಸಿಯುತ್ತಿದೆ.

ಕರ್ನಾಟಕದಲ್ಲಿ ಮೊದಲು ಬಿತ್ತನೆ ನಡೆಯುವುದು ಕೇರಳಕ್ಕೆ ಹೊಂದಿಕೊಂಡ ಹೆಗ್ಗಡದೇವನ ಕೋಟೆ, ಪಿರಿಯಾಪಟ್ಟಣ ಮತ್ತು ಹುಣಸೂರು ಪ್ರದೇಶಗಳಲ್ಲಿ. ಯುಗಾದಿ ಕಳೆದುಕೊಂಡು ಬಿತ್ತನೆ ಕಾಣುವ ಇಲ್ಲಿನ ಹೊಲಗಳು ಗೌರಿ ಹಬ್ಬದ ಹೊತ್ತಿಗೆ ಕುಯಿಲಿಗೆ ಸಿದ್ಧವಾಗಿರುತ್ತವೆ. ಕಳೆದ ಐದಾರು ವರ್ಷಗಳಿಂದ ಹದವಾಗಿ ಬರುತ್ತಿದ್ದ ಮಳೆ ಕೈಕೊಟ್ಟು, ಇಲ್ಲಿನ ರೈತರು ಕಷ್ಟಕ್ಕೆ ಸಿಲುಕಿದ್ದಾರೆ. ಕಳೆ ತೆಗೆಯಲು ಬೇಕಾದ ಮಳೆ ಬರದೆ ಸತಾಯಿಸುವುದು ಇಲ್ಲವೆ ಕಳೆ ತೆಗೆಯಲು ಅವಕಾಶವೇ ಇಲ್ಲದಂತೆ ಮಳೆ ಸುರಿಯುವುದು ಸಾಮಾನ್ಯವಾಗಿದೆ.

ದಕ್ಷಿಣ ಕರ್ನಾಟಕದ ಒಣಭೂಮಿ ಪ್ರದೇಶಗಳಲ್ಲಿ ಮುಂಡುಗ, ಪುಟ್ಟ ಭತ್ತ, ದೊಡ್ಡಿ ಭತ್ತ, ಭೈರ ನೆಲ್ಲು, ಬಿಳಿನೆಲ್ಲು, ಕರಿ ನೆಲ್ಲು, ಮರ ನೆಲ್ಲು ಮೊದಲಾದ ದಪ್ಪಕಾಳಿನ, ಕೆಂಪಕ್ಕಿಯ ಒಣಭೂಮಿ ಭತ್ತ ಬೆಳೆಯುವ ವಾಡಿಕೆ ಇತ್ತು. ಮಳೆ ಬಂದ ಒಂದೆರಡು ದಿನ ಜಲಾವೃತ, ಉಳಿದಂತೆ ಸದಾ ತೇವ ಇರುತ್ತಿದ್ದ ನೀರಕ್ಕಿಗಳಿವು!. ‘ಎಲ್ಲಿ ಸಾ! ಮಳೀನೆ ಬರಲ್ಲ. ಹತ್ತು–ಹದಿನೈದು ವರ್ಷಾನೇ


ಆಗುಂಬೆಯ ಮಳೆಮುಂಜಾವು...